**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 101/2019** **CW-1** **PW-1**

**ಸಾಕ್ಷಿಯನ್ನು ದಿಃ 16.11.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ರೂಪ |
| ಗಂಡನ ಹೆಸರುಃ | ಯೋಗೇಶ್ |
| ವಯಸ್ಸುಃ | 31 |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಗ್ಯಾರ ಆಲದಹಳ್ಳಿ |

**ಮುಖ್ಯವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸ-2 ನನ್ನ ತಾಯಿ. ಚಾಸ-3 ನನ್ನ ಮೈದುನ. ಚಾಸ-4 ರಿಂದ 11 ಗೊತ್ತು. 1 ನೇ ಆರೋಪಿ ನನ್ನ ಗಂಡ. 2 ಮತ್ತು 3 ನೇ ಆರೋಪಿತರು ನನ್ನ ಮಾವ, ಅತ್ತೆ. 4 ನೇ ಆರೋಪಿ ನನ್ನ ಭಾವ. 5 ನೇ ಆರೋಪಿ ನನ್ನ ಮೈದುನ. ನನ್ನ ತಂದೆ-ತಾಯಿಗೆ ನಾವು 3 ಜನ ಮಕ್ಕಳು. ಅವರುಗಳಲ್ಲಿ ಇಬ್ಬರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ನನ್ನ ಅಣ್ಣ ಹೀಗೆ 16 ವರ್ಷಗಳ ಹಿಂದೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ.

ನನ್ನ ಮತ್ತು 1 ನೇ ಆರೋಪಿಯ ವಿವಾಹ ದಿಃ 05-08-2012 ರಂದು ಹೇಮಾವತಿ ಕಲ್ಯಾಣ ಮಂಟಪ, ಮೈಸೂರು ರಸ್ತೆ, ಚನ್ನರಾಯಪಟ್ಟಣದಲ್ಲಿ ಆಗಿರುತ್ತದೆ. ಮದುವೆಗೆ ಮೂರುವರೆ ತಿಂಗಳ ಹಿಂದೆ ಮದುವೆಯ ಮಾತುಕತೆ ನನ್ನ ತಾಯಿಯ ಮನೆಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನನ್ನ ತಂದೆ-ತಾಯಿ ಮತ್ತು ಊರಿನ ಗ್ರಾಮಸ್ಥರು ಹಾಗೂ ಆರೋಪಿಗಳು ಹಾಜರಿದ್ದರು. ಆ ಸಮಯದಲ್ಲಿ 2 ಲಕ್ಷ ಹಣ ಮತ್ತು 150 ಗ್ರಾಂ ಚಿನ್ನವನ್ನು ವರದಕ್ಷಿಣೆಯಾಗಿ ಕೊಟ್ಟು ಛತ್ರದಲ್ಲಿ ಮದುವೆ ಮಾಡಿಕೊಡುವಂತೆ ಮಾತುಕತೆಯಾಗಿತ್ತು . ಆ

ಪ್ರಕಾರ 2 ಲಕ್ಷ ಹಣವನ್ನು ಮದುವೆಗೆ ಮುನ್ನ ನೀಡಿರುತ್ತಾರೆ. ಮದುವೆಯ ದಿನ 150 ಗ್ರಾಂ ಚಿನ್ನವನ್ನು ನೀಡಿರುತ್ತಾರೆ. ಮದುವೆಯ ನಂತರ ನಾನು ಆರೋಪಿಗಳ ಜೊತೆ ಅವರ ಮನೆಯಲ್ಲಿಯೇ ವಾಸವಿದ್ದೆನು. ನನ್ನನ್ನು ಸುಮಾರು 1 ವರ್ಷ 1 ತಿಂಗಳವರೆಗೂ ಆರೋಪಿಗಳು ಚೆನ್ನಾಗಿ ನೋಡಿಕೊಂಡರು, ಆನಂತರ ಆರೋಪಿಗಳು ನಮ್ಮ ಅಣ್ಣ ಮೃತಪಟ್ಟಿರುವ ಪರಿಹಾರದ ಹಣವನ್ನು ತಂದುಕೊಡುವಂತೆ ನನಗೆ ಕಿರುಕುಳ ಕೊಡಲು ಪ್ರಾರಂಭಿಸಿದರು. ನಂತರ ನನ್ನ ತಂದೆ-ತಾಯಿ ಮೂರುವರೆ ಲಕ್ಷ ಹಣವನ್ನು ಆರೋಪಿಗಳಿಗೆ ತಂದುಕೊಟ್ಟಿರುತ್ತಾರೆ. ಆ ನಂತರವೂ ಸಹ ಹೆಚ್ಚಿನ ವರದಕ್ಷಿಣೆಗಾಗಿ ಪೀಡಿಸಲು ಪ್ರಾರಂಭಿಸಿದರು. ಸದರಿ ವಿಚಾರವನ್ನು ನನ್ನ ತಂದೆ-ತಾಯಿಗಳಿಗೆ ಹೇಳಲು ಸಹ ನನಗೆ ಬಿಡುತ್ತಿರಲಿಲ್ಲ.

ನಂತರ ಆರೋಪಿಗಳು ನಮ್ಮ ತಂದೆಯ ಹೆಸರಿನಲ್ಲಿದ್ದ ಒಂದು ಎಕರೆ ಜಮೀನನ್ನು ತಮಗೆ ಬರೆಸಿಕೊಡುವಂತೆ ಆರೋಪಿಗಳು ನನಗೆ ಕಿರಕುಳ ನೀಡಿರುತ್ತಾರೆ. ಅದಕ್ಕೆ ನಾನು ಒಪ್ಪದಿದ್ದಾಗ ಆರೋಪಿಗಳು ಕಾಯಿಸಿದ ಎಣ್ಣೆಯನ್ನು ಬಲಗಾಲಿನ ಮೇಲೆ ಹಾಕಿರುತ್ತಾರೆ. ನಂತರ ಆರೋಪಿಗಳು ನೀನು ಸದರಿ ಜಮೀನನ್ನು ನನ್ನ ಹೆಸರಿಗೆ ಬರೆಸಿಕೊಡದಿದ್ದರೆ ನನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ನಂತರ 2018 ಏಪ್ರಿಲ್ ತಿಂಗಳಲ್ಲಿ ನಾನು ಪಾತ್ರೆ ತೊಳೆದು ಮನೆಯ ಒಳಗೆ ತರುತ್ತಿದ್ದಾಗ ಆರೋಪಿಗಳೆಲ್ಲರೂ ಮಂಜನ ಹೆಂಡತಿಯನ್ನು ಹೇಗೆ ಸಾಯಿಸಲಾಗಿತ್ತೋ ಅದೇ ರೀತಿ ಇವಳನ್ನು ಸಾಯಿಸಿ ಬಿಡೋಣ ಎಂದು ಮಾತನಾಡಿಕೊಳ್ಳುತ್ತಿದ್ದರು. ಅದನ್ನು ಕೇಳಿಸಿಕೊಂಡು ಪಾತ್ರೆಯನ್ನು ಅಲ್ಲಿಯೇ ಇಟ್ಟು ಭಯ ಪಟ್ಟು ಅಲ್ಲಿಂದ ನನ್ನ ತಂದೆಯ ಮನೆಗೆ ಹೋಗಿರುತ್ತೇನೆ. ನಾನು ಪೋಲೀಸ್ ಠಾಣೆಗೆ ದೂರು ನೀಡಲು ಹೋಗಲು ಪ್ರಯತ್ನಿಸಿದಾಗ ಆರೋಪಿಗಳು ನನಗೆ ಬಿದರಿಕೆ ಹಾಕುತ್ತಿದ್ದರು. ಆನಂತರ ಪಂಚಾಯ್ತಿಯನ್ನು ಸಹ ಸೇರಿಸಲಾಯಿತು, ಆ ಪಂಚಾಯ್ತಿಗೆ ಆರೋಪಿಗಳು ಬಂದಿರುವುದಿಲ್ಲ. ಆ ಪಂಚಾಯ್ತಿಯವರಿಗೂ ಸಹ ಬೆದರಿಕೆ ಹಾಕಿರುತ್ತಾರೆ.

ನಂತರ ನಾನು ದಿಃ 06-11-2018 ರಂದು ಆರೋಪಿಗಳ ವಿರುದ್ಧ ದೂರು ನೀಡಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಒಂದು ಮಹಜರ್ ಅನ್ನು ತೋರಿಸಲಾಗಿ ಸಾಕ್ಷಿಯ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸದರಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಗುಂಡಶೆಟ್ಟಿಹಳ್ಳಿ ಗ್ರಾಮದ ಆರೋಪಿಗಳ ಮನೆಯ ಹತ್ತಿರ ಪೋಲೀಸರು ಬಂದಾಗ ಮಾಡಿರುತ್ತೇನೆ. ಸಾಕ್ಷಿ ವಿವಾಹ ಆಮಂತ್ರಣ ಪತ್ರಿಕೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-3 ಎಂದು, ಸಾಕ್ಷಿಗೆ ಮದುವೆಯ 4 ಛಾಯಾಚಿತ್ರಗಳನ್ನು ತೋರಿಸಲಾಗಿ ಅವುಗಳನ್ನು ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾಗಿ ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಡವೆಗಳ ಒಂದು ಎಸ್ಟಿಮೇಶನ್ ಮತ್ತು ಬಿಲ್ಲನ್ನು ತೋರಿಸಲಾಗಿ, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಕೆ.ಜಿ.ಡಿ ವಕೀಲರಿಂದಃ</u>**

ದಿಃ 13-11-2018 ರಂದು 1 ನೇ ಆರೋಪಿಯು ನನ್ನ ಜೊತೆ ಬಂದು ಸಾಂಸಾರಿಕ ಜೀವನ ನಡೆಸುವಂತೆ ನನಗೆ ವಕೀಲರ ಮೂಲಕ ನೋಟೀಸ್ ನೀಡಿದ್ದ ಎಂದರೆ ಸಾಕ್ಷಿಯು ನೋಟೀಸು ನೀಡಿದ್ದರು ಆದರೆ ಅದರಲ್ಲಿ ಬಂದು ಸಾಂಸಾರಿಕ ಜೀವನ ಮಾಡು ಎಂದು ತಿಳಿಸಿರಲಿಲ್ಲ ಬದಲಿಗೆ ವಿಚ್ಛೇದನ ಕೋರಿದ್ದರು ಎಂದು ನುಡಿಯುತ್ತಾರೆ. ಸದರಿ ನೋಟೀಸಿನಲ್ಲಿ

ಬಂದು ಜೀವನ ಮಾಡು, ಇಲ್ಲದಿದ್ದರೆ ವಿಚ್ಛೇದನ ಕೊಡು ಎಂದು ತಿಳಿಸಲಾಗಿತ್ತು ಎಂದರೆ ಸರಿ. ಗುಂಡಶೆಟ್ಟಿಹಳ್ಳಿಯಲ್ಲಿ ಆರೋಪಿಗಳಿಗೆ ಒಟ್ಟು 2 ಮನೆಗಳಿವೆ. ಅವುಗಳಲ್ಲಿ ಒಂದು ಮನೆಯಲ್ಲಿ ನಾನು ಮತ್ತು 1 ನೇ ಆರೋಪಿ ವಾಸವಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಎಲ್ಲಾ ಒಟ್ಟಿಗೆ ಒಂದೇ ಮನೆಯಲ್ಲಿ ವಾಸವಿರುತ್ತೇವೆ ಎಂದು ನುಡಿಯುತ್ತಾರೆ. 4 ನೇ ಆರೋಪಿ ತನ್ನ ಕುಟುಂಬ ಸಹಿತ ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಆರೋಪಿಯು ಖಾಸಗಿ ಕೆಲಸದಲ್ಲಿರುತ್ತಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ ಸದರಿ ವಿಚಾರ ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿಗಳು ಒಂದು ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಆರೋಪಿ ಒಂದೇ ಮನೆಯಲ್ಲಿ ವಾಸವಿದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಯಾವುದೇ ಮಕ್ಕಳಿಲ್ಲ. ನನಗೆ ಮಕ್ಕಳಾಗದಿದ್ದ ಕಾರಣ 1 ನೇ ಆರೋಪಿ ನನಗೆ ವೈದ್ಯರಿಂದ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸಾಕ್ಷಿಯು ಮದುವೆಯಾದ 2 ತಿಂಗಳಿಗೆ ಕರೆದುಕೊಂಡು ಹೋಗಿದ್ದರು, ಅದಕ್ಕೆ ವೈದ್ಯರು ಇಷ್ಟು ಬೇಗ ಬಂದಿದ್ದೀರ ಎಂದು ಬೈದು ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ಅದಾದ ನಂತರವೂ 1 ನೇ ಆರೋಪಿ ನನಗೆ ಚಿಕಿತ್ಸೆ ಕೊಡಿಸಿದಾಗ ನನಗೆ ಮಕ್ಕಳಾಗುವುದಿಲ್ಲ ಎಂದು ವೈದ್ಯರು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು 1 ನೇ ಆರೋಪಿಗೆ ಮಕ್ಕಳಾಗುವುದಿಲ್ಲ ಎಂದು ವೈದ್ಯರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗಳು ಕಳುಹಿಸಿದ ನೋಟೀಸಿಗೆ ನಾನು ಜವಾಬು ನೀಡಿರುವುದಿಲ್ಲ. ಸದರಿ ನೋಟೀಸು ನೀಡಿದ ಒಂದು ತಿಂಗಳ ನಂತರ ನಾನು ಉದ್ದೇಶಪೂರ್ವಕವಾಗಿ ಸುಳ್ಳು ಆಪಾದನೆಗಳ ಮೇಲೆ ಆರೋಪಿಯ ವಿರುದ್ಧ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮದುವೆ ಮಾತುಕತೆಯಲ್ಲಿ ಆರೋಪಿಗಳಿಗೆ ವರದಕ್ಷಿಣೆ ಕೊಡುವ ಬಗ್ಗೆ ಮಾತುಕತೆಯಾಗಿರುತ್ತದೆ ಎನ್ನುವುದು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಯಾವುದೇ ವರದಕ್ಷಿಣೆ ತೆಗೆದುಕೊಳ್ಳದೆ ಸರಳವಾಗಿ ನನ್ನನ್ನು ವಿವಾಹ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ವೀಳ್ಯೆದೆಲೆ ಕೊಡುವ ಸಮಯದಲ್ಲಿ ಆರೋಪಿಗಳಿಗೆ 2 ಲಕ್ಷ ಹಣ ಕೊಟ್ಟಿರುವ ಬಗ್ಗೆ ನಿಪಿ-1 ರಲ್ಲಿ ತಿಳಿಸಿಲ್ಲ. ನಾನು 1 ನೇ ಆರೋಪಿಗೆ 2 ಲಕ್ಷ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ದಾಖಲೆ ಇಲ್ಲ. ಆರೋಪಿಗೆ ನಾವು ಯಾವುದೇ ಒಡವೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ.

ನಾನು ನನಗೆ ಮಕ್ಕಳಾಗುವುದಿಲ್ಲ, ನೀನು ಬೇರೆ ಮದುವೆ ಮಾಡಿಕೋ ಎಂದು 1 ನೇ ಆರೋಪಿಗೆ ಹೇಳಿ ನನ್ನ ತಂದೆಯ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ಸಮಯದಲ್ಲಿ ಜಗಳ ಮಾಡಿ ಹೋಗಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಕ್ಯಾಂಟರ್ ಲಾರಿಯನ್ನು ಓಡಿಸುತ್ತಿದ್ದರು. 1 ನೇ ಆರೋಪಿ ಹೊರಗೆ ಹೋಗಿದ್ದಾಗ ನಾನು ಹೇಳದೆ ಕೇಳದೆ ನನ್ನ ಬಟ್ಟೆಗಳನ್ನು ತೆಗೆದುಕೊಂಡು ನನ್ನ ತಂದೆಯ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಮಾರು 4-5 ಬಾರಿ ಮನೆ ಬಿಟ್ಟು ಹೋದಾಗಲೂ ಆರೋಪಿಗಳು ಪಂಚಾಯ್ತಿ ಮಾಡಿ ನನ್ನನ್ನು ಮನೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ನನ್ನ ಮದುವೆಗೆ ಮುನ್ನ ತೀರಿಕೊಂಡಿದ್ದರು. ನನ್ನ ಅಣ್ಣನ ಸಾವಿನ ಪರಿಹಾರದ ಹಣವನ್ನು ತಮಗೆ ತಂದುಕೊಡುವಂತೆ ಆರೋಪಿತರು ಕಿರುಕುಳ ನೀಡಿದ್ದರು ಎನ್ನುವುದು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಅಪಘಾತದ ಪರಿಹಾರದ ಹಣವನ್ನು ಆರೋಪಿಗಳಿಗೆ ನೀಡಿರುತ್ತಾರೆ. ಆ ಬಗ್ಗೆ ನಮ್ಮ ಬಳಿ ದಾಖಲೆಗಳು ಇಲ್ಲ. ನಾವು ಆರೋಪಿಗಳಿಗೆ 3,50,000/- ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಹೆಚ್ಚಿನ

ವರದಕ್ಷಿಣೆ ತರುವಂತೆ ನನಗೆ ಯಾವುದೇ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿಗಳು ನಮ್ಮ ಜೊತೆ ವಾಸವಿರದಿದ್ದರೂ ಸಹ ಅವರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು 2017 ರಿಂದಲೂ ಜಮೀನನ್ನು ತಮ್ಮ ಹೆಸರಿಗೆ ಬರೆಸಿಕೊಡುವಂತೆ ಕಿರುಕುಳ ನೀಡುತ್ತಿದ್ದರು. ಆ ಸಮಯದಲ್ಲಿ ನಾನು ಯಾವುದೇ ದೂರು ದಾಖಲು ಮಾಡಿರುವುದಿಲ್ಲ. ಆರೋಪಿಗಳು ನನ್ನ ಕಾಲಿಗೆ ಬಿಸಿ ಎಣ್ಣೆ ಹಾಕಿದ ಬಗ್ಗೆ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ, ಮೂರು ದಿನಗಳ ನಂತರ ಔಷಧಿ ತಂದುಕೊಟ್ಟಿರುತ್ತಾರೆ. ಸದರಿ ವಿಚಾರವನ್ನು ನಿಪಿ-1 ರಲ್ಲಿ ತಿಳಿಸಿರುವುದಿಲ್ಲ. ಆರೋಪಿಗಳು ಠಾಣೆಯ ಬಳಿಯೂ ಸಹ ನಮಗೆ ಬೆದರಿಕೆ ಹಾಕಿರುತ್ತಾರೆ. ಆ ಸಂಬಂಧ ಪೋಲೀಸರು ಆರೋಪಿಗಳನ್ನು ಕರೆದು ಎಚ್ಚರಿಕೆ ನೀಡಿದರು. ಮೇಲೆ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

1 ನೇ ಆರೋಪಿ ನನ್ನ ವಿರುದ್ಧ ಎಂ.ಸಿ. 120/2018 ರಂತೆ ವಿಚ್ಛೇದನ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಅದು ಪುರಸ್ಕೃತಗೊಂಡಿರುತ್ತದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅದರ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲಾಗಿದೆ ಎಂದು ನುಡಿಯುತ್ತಾರೆ. ಆರೋಪಿಗಳು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದರೂ ನನಗೆ ಮಕ್ಕಳಾಗಲಿಲ್ಲ ಎಂಬ ಕಾರಣಕ್ಕೆ ಅವರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಕಿರುಕುಳ ನೀಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ದೂರು ದಾಖಲು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿಗಳು ವಿವಾಹವಾಗಿ

ಪ್ರತ್ಯೇಕವಾಗಿ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಿಗೆ ವಾಸವಿದ್ದೆವು ಎಂದು ನುಡಿಯುತ್ತಾರೆ.

ನಿಪಿ-2 ಕ್ಕೆ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ಪುಟ್ಟರಾಜು ಎಂಬುವವರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಪಿ-2 ನ್ನು 11 ರಿಂದ 12 ಗಂಟೆಯವರೆಗೆ ಬರೆದಿರುತ್ತಾರೆ. ನಿಪಿ-2 ರಲ್ಲಿ ಏನು ಬರೆದಿದೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ. ನಿಪಿ-1 ನ್ನು ನಾನೇ ಬರೆದಿರುತ್ತೇನೆ. ನನ್ನ ಮತ್ತು 1 ನೇ ಆರೋಪಿಗೆ ಪ್ರತ್ಯೇಕ ಪಡಿತರ ಚೀಟಿ ಇದೆ ಎಂದರೆ ಸರಿ.

ನಿಪಿ-5 ಮತ್ತು 6 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಅವು ರಶೀದಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲಾ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**